ಗೊತ್ತಾಗುವುದಿಲ್ಲ. ಈಗಿರುವ ಅಧಿಕಾರಿಗಳನ್ನು ಹೊರತುಪಡಿಸಿ ತನಿಖೆ ಮಾಡುತ್ತೀರಾ ? ಸಿ.ಓ.ಡಿ. ವರದಿ ಪ್ರಕಾರ ನಿಮಗೆ ಏನೂ ತಿಳಿದುಬಂದಿಲ್ಲ. ಅವರಿಗೂ ರಜ ಕೊಡಿ. ನಿಮ್ಮ ಡೈರೆಕ್ಟರಿಗೂ ರಜ ಕೊಟ್ಟು ಕಳ್ಳತನ ಆಗಿರುವುದನ್ನು ಕಂಡುಹಿಡಿಯುತ್ತೀರಾ ಎಂದು ನಿಮ್ಮನ್ನು ಕೇಳುತ್ತೇನೆ.

ಶ್ರೀ ಕೆ. ಗಂಗಾಧರ್.—ಸಿ.ಓ.ಡಿ. ವರದಿ ಪ್ರಕಾರ ವಸ್ತುಗಳು ಕಳುವಾಗಿಲ್ಲವೆಂದು ಗೊತ್ತಾಗುತ್ತದೆ. ಈ ವಿಚಾರದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆಯ ನಿರ್ದೇಶಕರ ಅಭಿಪ್ರಾಯವನ್ನು ಪಡೆಯಲಾಗಿದೆ ಎಂದು ವರದಿಯಲ್ಲಿ ಕೊಟ್ಟಿದ್ದಾರೆ. ಹೊಸ ತನಿಖೆ ಮಾಡಿ ಸತ್ಯಸಂಗತಿಯನ್ನು ತಿಳಿದುಕೊಳ್ಳುವಾಗ ನಿರ್ದೇಶಕರವರಿಂದ ಏನಾದರೂ ಹಸ್ತಕ್ಷೇಪವಾಗಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಂ.ಸಿ. ನಾನಯ್ಯ.—ನಿರ್ದೇಶಕರವರಿಂದ ಹಸ್ತಕ್ಷೇಪವಾಗಿದೆ ಎಂದು ಗೊತ್ತಾಗಿ ಬಿಟ್ಟಿದೆ. ೧೦ ವಸ್ತುಗಳು ಕಳುವಾಗಿ ಅದರ ಸ್ಥಾನದಲ್ಲಿ ಬೇರೆ ೧೦ ವಸ್ತುಗಳು ಬಂದಿದೆ. ಈಗಲೂ ಅವರನ್ನೆ. ಇಟ್ಟುಕೊಂಡರೆ ಇನ್ನೂ ೧೦ ವಸ್ತುಗಳು ಹೋಗಿ ಬೇರೆ ಹತ್ತು ವಸ್ತುಗಳು ಬರುತ್ತವೆ. ಈ ಬಗ್ಗೆ ತಮಗೆ ಸಂಪೂರ್ಣ ಮಾಹಿತಿ ಗೊತ್ತಾಗಬೇಕಾದರೆ ದಯವಿಟ್ಟು ನಿರ್ದೇಶಕರವರನ್ನು ಹೊರಗೆ ಇಟ್ಟು ತನಿಖೆ ಮಾಡುತ್ತೀರಾ ?

ಶ್ರೀ ಕೆ. ಗಂಗಾಧರ್.—ಇದು ಹಿಂದೆ ಆದಂತಹ ರೀತಿಯಲ್ಲಿ ಮುಂದೆ ಆಗುವುದಕ್ಕೆ ನಾವು ಬಿಡುವುದಿಲ್ಲ. ಇದರಲ್ಲಿ ಒಂದು ಪಕ್ಷ ನಿರ್ದೇಶಕರು ಹಸ್ತಕ್ಷೇಪ ಮಾಡಿದ್ದರೆ ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

## LEGISLATIVE BUSINESS

## KARNATAKA STATE SERVANTS (DETERMINATION OF AGE) (AMENDMENT) BILL, 1982.

*Leave to Introduce*

SRI R. GUNDU RAO (Chief Minister).—Sir, I beg to move:

"That leave be granted to introduce the Karnataka State Servants (Determination of Age) (Amendment) Bill, 1982."

MR. SPEAKER.—The question is;

"That leave be granted to introduce the Karnataka State Servants (Determination of Age) (Amendment) Bill, 1982."

*The motion was adopted and the leave was granted.*

SRI R. GUNDU RAO.—Sir, I introduce the Karnataka State Servants (Determination of Age) Amendment) Bill, 1982.

MR. SPEAERK.—The Bill is introduced.*

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಸಭಾಧ್ಯಕ್ಷರೆ, ೧೪೬ನೇ ಅಧಿನಿಯಮದ ಪ್ರಕಾರ ಸಿಮೆಂಟ್ ವಿತರಣೆ ಬಗ್ಗೆ ನಾವು ಒಂದು ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೆವು. ಈ ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಂಡಿದ್ದೆ.

ಅಧ್ಯಕ್ಷರು.—ನಾನು ಈಗ ತಾನೇ ಹೇಳಿದ್ದೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಬೊಮ್ಮಾಯಿ ಯವರೂ ಕೂಡ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

---

*Annexure.

ಶ್ರೀ ಎ. ಲಕ್ಷ್ಮಿಸಾಗರ್.—ಅವರು ಏತಕ್ಕೆ ಪ್ರಸ್ತಾಪ ಮಾಡಿದರು ಎಂದರೆ, ಬ್ಯುಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿರ್ಣಯವನ್ನು ತಿಳಿಸುವಾಗ ಇದನ್ನು ಮರೆತುಬಿಡುತ್ತೀರಿ. ಆದ್ದರಿಂದ ಇದನ್ನು ಜ್ಞಾಪಿಸಬೇಕು ಎಂದು. ನಾನು ಆ ದಿವಸವೇ ತಮಗೆ ಕೇಳಿಕೊಂಡಿದ್ದೇನೆ. ಈ ವಿಚಾರ ಬಹಳ ಮುಖ್ಯವಾಗಿರುವುದರಿಂದ ಆಯವ್ಯಯ ಪಟ್ಟಿಯ ಮೇಲೆ ಸಾಮಾನ್ಯ ಚರ್ಚೆ ಮಾಡುವುದಕ್ಕೆ ಮೊದಲೇ ಈ ವಿಚಾರದಲ್ಲಿ ನಾವು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನೂ ಹಾಗೂ ನನ್ನ ಇನ್ನೂ ಅನೇಕ ಮಾನ್ಯ ಮಿತ್ರರು ಈ ಸೂಚನೆಗೆ ಸಹಿ ಹಾಕಿ ತಮ್ಮಲ್ಲಿ ಲಿಖಿತ ಮೂಲಕ ಪ್ರಾರ್ಥಿಸಿಕೊಂಡಿದ್ದೇವೆ.

ಆದ್ದರಿಂದ ನಾನು ತಮ್ಮಲ್ಲಿ ಅತಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಈ ವಿಚಾರ ನಮ್ಮ ದೃಷ್ಟಿಯಲ್ಲಿ ಬಹಳ ಮುಖ್ಯವಾಗಿರುವುದರಿಂದ ಈ ಸಭೆಯ ಕಾರ್ಯಕಲಾಪಗಳನ್ನು ಸ್ವಲ್ಪಮಟ್ಟಿಗೆ ಬದಿಗಿಟ್ಟು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ನಾನು ಈ ವಿಚಾರವನ್ನು ಬ್ಯುಸಿನೆಸ್ ಅಡ್ವೈಸರಿ ಕಮಿಟಿಯಲ್ಲೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಇದು ಇಡೀ ದೇಶದ ಗಮನವನ್ನೇ ಸೆಳೆದಿರತಕ್ಕ ವಿಚಾರ. ಈ ವಿಚಾರದ ಗಹನತೆ ಏನೇ ಇರಲಿ ಈ ವರ್ಷದಲ್ಲಿ ಇದು ಅತ್ಯಂತ ಪ್ರಮುಖವಾದ ವಿಚಾರವಾಗಿರುವುದರಿಂದ ಇದಕ್ಕೆ ಹೆಚ್ಚಿನ ಆದ್ಯತೆ ನೀಡಿ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಈ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಲಿಖಿತ ಮೂಲಕ ಕೇಳಿಕೊಂಡಿದ್ದೇನೆ.

ಅಧ್ಯಕ್ಷರು.—ನಾನು ತಮಗೆ ನಿನ್ನೆಯ ದಿವಸವೂ ಹೇಳಿದ್ದೇನೆ. ಅಲ್ಲದೆ ಈ ಮಧ್ಯೆ ಇದನ್ನು ಚರ್ಚೆ ಮಾಡಲು ತಮಗೆ ಅವಕಾಶವನ್ನು ಮಾಡಿಕೊಡುತ್ತೇನೆಂದೂ ಕೂಡ ನಾನು ಹೇಳಿದ್ದೇನೆ.

ಶ್ರೀ ಎ. ಲಕ್ಷ್ಮಿಸಾಗರ್.—ಒಂದು ಸಾರಿ ಆಯವ್ಯಯದ ಮೇಲೆ ಚರ್ಚೆಯನ್ನು ಪ್ರಾರಂಭಮಾಡಿ ಮತ್ತೆ ಅದನ್ನು ಮಧ್ಯದಲ್ಲಿ ನಿಲ್ಲಿಸಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡು ಆನಂತರ ಆಯವ್ಯಯ ಚರ್ಚೆಗೆ ಹೋಗುವುದು ಅಷ್ಟಾಗಿ ನನಗೆ ಸರಿಕಾಣುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ತಾವು ಈ ಸಭೆಯ ಮಾನ್ಯ ಅಧ್ಯಕ್ಷರು. ನಾವು ತಮಗೆ ಕಳುಹಿಸಿಕೊಟ್ಟಿರುವ ಸೂಚನೆಯ ಗಹನತೆಯನ್ನು ತಿಳಿದುಕೊಂಡು ಈ ಸಭೆಯ ಕಾರ್ಯಕಲಾಪಗಳಿಗೆ ತೊಂದರೆಯಾಗದಂತೆ ಯಾವ ದಾರಿಯಲ್ಲಾದರೂ ಒಂದು ದಿನವನ್ನು ಇದಕ್ಕಾಗಿಯೇ ನಿಗದಿ ಮಾಡುವುದಕ್ಕೆ ತಮಗೆ ಅಧಿಕಾರವಿದೆ. ಇಲ್ಲವೇ ನಾನು ಈಗಾಗಲೇ ಹೇಳಿದಂತೆ ಈ ವಿಚಾರ ಬಹಳ ಗಹನವಾಗಿರುವುದರಿಂದ ಇವತ್ತೇ ಇದನ್ನು ತೆಗೆದುಕೊಂಡು ಚರ್ಚೆಮಾಡಿ ಒಂದು ತೀರ್ಮಾನ ತೆಗೆದುಕೊಳ್ಳೋಣ. ಇದು ತಮ್ಮಲ್ಲಿ ನನ್ನ ಕಳಕಳಿಯ ಮನವಿ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೆ, ಈಗ ತಾನೆ ವಿರೋಧಪಕ್ಷದ ನಾಯಕರು ತಮ್ಮ ಬೇಡಿಕೆ ಏನೆಂಬುದನ್ನು ತಮಗೆ ತಿಳಿಸಿದ್ದಾರೆ. ನಿನ್ನೆಯ ದಿವಸ ನಡೆದಂಥ ಬ್ಯುಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ. ತಾವು ಮಾತನಾಡುತ್ತಾ ಈ ಬಗ್ಗೆ ಸಮಿತಿಯ ವರದಿಯನ್ನು ಸಭೆಯ ಮುಂದೆ ಮಂಡಿಸಲಾಗಿದೆ, ಇದರ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಡುತ್ತೇನೆಂದು ತಾವು ಹೇಳಿದ್ದಿರಿ...

ಅಧ್ಯಕ್ಷರು.—ನಾನು ಆ ರೀತಿ ಹೇಳಿಲ್ಲ. ನಿಯಮದ ಪ್ರಕಾರ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿದ್ದರು. ಈಗ ಇನ್ನೊಂದು ನೋಟೀಸನ್ನು ಮಾನ್ಯ ಸದಸ್ಯರು ನಿಯಮ ೨೫೬ರ ಕೆಳಗೆ ಕಳುಹಿಸಿಕೊಟ್ಟಿದ್ದಾರೆ. ತಮಗೇ ಗೊತ್ತಿರುವಂತೆ It requires time...

Sri D. Devaraj Urs.—Discussion under specific rule 56...

Mr. Speaker.—I have already told you yesterday. ನಾನು ಇದನ್ನು ಗಮನಿಸುತ್ತೇನೆ ಮತ್ತು ಆದಷ್ಟು ಜಾಗ್ರತೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಆದರೆ ಈಗ ಆಯವ್ಯಯದ ಮೇಲೆ ಚರ್ಚೆಯನ್ನು ಪ್ರಾರಂಭಿಸಾಡಿ ಆದನ್ನು ಮಧ್ಯದಲ್ಲಿ ನಿಲ್ಲಿಸಿ ಆನಂತರ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡು ಮತ್ತೆ ಆಯವ್ಯಯದ ಚರ್ಚೆಗೆ ಹೋಗಬೇಕಾದ ಸಂದರ್ಭ ಬಾಬುಹುದೆಂದು ಮಾನ್ಯ ಲಕ್ಷ್ಮಿಸಾಗರ್‌ರವರು ಶಂಕೆಯನ್ನು ವ್ಯಕ್ತಮಾಡುತ್ತಿದ್ದಾರೆ. ಆದರೆ ಆ ರೀತಿ ಆಗುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಈ ಬಗ್ಗೆ ಸರ್ಕಾರದ ಜೊತೆ ಮಾತನಾಡಿ ತಮಗೆ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ನಾನು ಮಾನ್ಯ ಸದಸ್ಯರಾದ ಬೊಮ್ಮಾಯಿಯವರ ಪತ್ರಿಕ ಕೂಡ ಹೇಳಿದ್ದೇನೆ. ಅವರು ಈಗ ತಾನೆ ನಿಯಮ ೨೫೬ರ ಕೆಳಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದಾರೆ. ಅದು ಸಬ್‌ಸ್ಟಿಟ್ಯೂಟ್ ಮೋಷನ್ ಆಗುತ್ತದೆ...

ಶ್ರೀ ಡಿ. ದೇವರಾಜ ಅರಸ್.—ಅದು ತಮಗೆ ಬಿಟ್ಟಿದ್ದು...

ಅಧ್ಯಕ್ಷರು.—ಇದರ ಬಗ್ಗೆ ಚರ್ಚೆ ಮಾಡಲು ತಮಗೆ ಅವಕಾಶ ಮಾಡಿಕೊಡುತ್ತೇನೆ ಎಂದು ನಾನು ತಮಗೆ ಈಗಾಗಲೇ ಹೇಳಿದ್ದೇನೆ ..

SRI D. DEVARAJ URS.—Sir, we are highly thankful to you for the generous attitude which you have taken to bring this report for a discussion according to Rule 146, according to us. Here, I do not wish to add anything more than what the Hon'ble Leader of the Opposition has already stated except to say that there is a specific matter and it relates to the report that has been submitted here. You will kindly appreciate the importance of it. Of course, I am also a signatory to it.

MR. SPEAKER.—I may provide an opportunity for discussion on this subject tomorrow or the day after tomorrow.

SRI D. DEVARAJ URS.—Then we are greatful to you. Sir, Thank you very much.

## FINANCIAL BUSINESS

### General discussion on the Budget 1982-83.

MR. SPEAKER.—Now, general discussion on the Budget proposals for the year 1982-83. The hon. Leader of the Opposition Sri A. Lakshmisagar will initiate the discussion.

SRI A. LAKSHMI SAGAR (Chickpet).—Mr. Speaker Sir, I expected that the Hon. Minister for Finance would present at least during the year 1982-83, a balanced Budget and show some improvement over the previous budget proposals. But, he has sung the same old song and tread the same old beaten track. Once again for the third year in succession, it is a deficit Budget, I do not know why he has not been able to manage to present a balanced Budget. He could have done it. In view of his claim that tax recoveries have been better and there have been measures of economy which resulted in certain savings and if that claim is correct, there was no need for him to present a deficit Budget. Before I dwell on these matters further, I should hasten to add by way of grievance one point. Yesterday I brought to your notice one point that some time must be set apart between the presentation of the Budget proposals and the general discussion. I made this point in the Business Advisory Committee also that we must evolve a procedure that is being followed in the Lok-Sabha i. e., there must be some time lag between the presentation of the Budget proposals and the general discussion on them. Otherwise, it will put the Members who would be participating in the discussion to a very great disadvantage. The economic survey was presented yesterday. That economic survey does not contain any